# 1 ನೇ ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆ:1368/2020 CW-1 PW-1

| | |
|---|---|
| ಹೆಸರು | ಆರೋಗ್ಯಪ್ಪ |
| ತಂದೆಯ ಹೆಸರು | ದ್ಯಾವಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ದೂಮ್ತಿ, ತಾ. ಸಿಂಧನೂರು. |

ದಿ: 16-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :ಸ ಸ ಅ ರವರಿಂದ

ಚಾಸಾ-4 ನನ್ನ ತಮ್ಮ. ಚಾಸಾ-5 ನನ್ನ ಹೆಂಡತಿ. ಚಾಸಾ-6 ನನ್ನ ತಮ್ಮನ ಹೆಂಡತಿ. ಚಾಸಾ-7 ನನ್ನ ಚಿಕ್ಕಪ್ಪ. ಚಾಸಾ-8 ನನ್ನ ಪರಿಚಯಸ್ಥ. ಆರೋಪಿತರು ಗೊತ್ತು. 3-4 ವರ್ಷಗಳ ಹಿಂದೆ ನಾನು ಮತ್ತು ಚಾಸಾ-5 ರವರು ಮನೆಯ ಹೊರಗಡೆ ಮಲಗಿದ್ದೆವು. ಮಧ್ಯರಾತ್ರಿ 1 ಗಂಟೆ ಸುಮಾರಿಗೆ 1 ನೇ ಆರೋಪಿಯು ನಮ್ಮ ಮನೆಯ ಬಾಗಿಲು ತೆಗೆದುಕೊಂಡು ಒಳಗೆ ಹೋಗಿ ನಮ್ಮ ಮನೆಯಲ್ಲಿ ಇಟ್ಟಿದ್ದ ಹಣ ರೂ.40,000/- ಮೊತ್ತವನ್ನು ತೆಗೆದುಕೊಂಡಿದ್ದನು. ನಂತರ ನನ್ನ ಹೆಂಡತಿಯ ಬಳಿ ಬಂದು ಆಕೆಯ ಕೊರಳಲ್ಲಿದ್ದ ಚೈನನ್ನು ಬಿಚ್ಚುತ್ತಿದ್ದನು. ಆಗ ನನಗೆ ಎಚ್ಚರ ಆಯಿತು. ನಾನು ಆತನನ್ನು ಹಿಡಿಯುವಷ್ಟರಲ್ಲಿ 1 ನೇ ಆರೋಪಿಯು ಓಡಿ ಹೋದನು.

ಮರುದಿನ ಬೆಳಗ್ಗೆ 7 ಗಂಟೆಗೆ 1 ನೇ ಆರೋಪಿಯನ್ನು ವಿಚಾರಿಸಲು ನಾನು, ಚಾಸಾ-4 & 5 ರವರು ಆತನ ಮನೆಯ ಬಳಿ ಹೋಗುವಾಗ 1 ರಿಂದ 3 ನೇ ಆರೋಪಿತರು ರಸ್ತೆಯಲ್ಲಿ ನಿಂತಿದ್ದರು. ಆಗ ನಾನು 1 ನೇ ಆರೋಪಿಗೆ ರಾತ್ರಿ ಏಕೆ ನಮ್ಮ ಮನೆಗೆ ಬಂದಿದ್ದೆ ಎಂದು ವಿಚಾರಿಸಿದೆನು. ಆಗ 1 ನೇ ಆರೋಪಿಯು ನನ್ನನ್ನು ನೀನು ನೋಡಿದ್ದೆಯಾ ಎಂದು ಕೇಳಿ ನನ್ನ ಜೊತೆ ಜಗಳ ತೆಗೆದೆನು. 1 ನೇ ಆರೋಪಿಯು ಕಲ್ಲಿನಿಂದ ನನ್ನ ತಮ್ಮ ಚಾಸಾ-4 ರವರ ಮುಖಕ್ಕೆ ಹೊಡೆದನು. ಅದರಿಂದ ಆತನ ಹಲ್ಲು ಮುರಿದವು. 2 & 3 ನೇ ಆರೋಪಿತರು ನನಗೆ ಮತ್ತು ನನ್ನ ಹೆಂಡತಿಗೆ ಹೊಡೆದರು. ನಂತರ ನಾನು, ಚಾಸಾ-4 & 5 ರವರು ನೇರವಾಗಿ ಬಳಗನೂರು ಪೋಲೀಸ್ ಠಾಣೆಗೆ ಹೋದೆವು. ನಾನು ದೂರು ನೀಡಿದೆನು. ನಂತರ ನಾವು ಸಿಂಧನೂರಿನ ಸರ್ಕಾರಿ ಆಸ್ಪತ್ರೆಗೆ ಹೋದೆವು. ಸಾಕ್ಷಿಯು ತಾನು ಕೊಟ್ಟ ದೂರು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಚಾಸಾ-4 ರವರನ್ನು ಸಿಂಧನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಸೇರಿಸಿದ್ದೆವು. ನಾನು ಮತ್ತು ಚಾಸಾ-5 ರವರು ಸಹ ಚಿಕಿತ್ಸೆ ಪಡೆದೆವು. ನಾವೆಲ್ಲರೂ ಒಂದು ವಾರಗಳ ಕಾಲ ಆಸ್ಪತ್ರೆಯಲ್ಲಿದ್ದೆವು. ಒಂದು ವಾರದ ನಂತರ ಪೋಲೀಸರು ನಮ್ಮ ಊರಿಗೆ ಬಂದಿದ್ದರು. ಆಗ ಘಟನಾ ಸ್ಥಳವನ್ನು ನಾನೇ ತೋರಿಸಿದ್ದೆನು. ಪೋಲೀಸರು ಸ್ಥಳದಲ್ಲಿ ಒಂದು ದಾಖಲೆಯನ್ನು ಬರೆದರು. ಆ ದಾಖಲೆಗೆ ನಾನು ಸಹಿ ಮಾಡಿದ್ದೆನು. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

ನನ್ನ ತಮ್ಮನಿಗೆ ಹೊಡೆದ ಕಲ್ಲನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಆರೋಪಿತರು ಹೊಡೆಯಲು ಬಳಸಿದ ಕಲ್ಲು ಇದೇ ರೀತಿ ಇತ್ತು ಎಂದು ನುಡಿದಿರುತ್ತಾರೆ.

**(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದದ್ದರಿಂದ ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸ.ಸ.ಅ. ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

ಪಾಟೀ ಸವಾಲು: ಸ.ಸ.ಅ ರವರಿಂದ

ದಿ.02-12-2019 ರಂದು ಮಧ್ಯರಾತ್ರಿ 12 ಗಂಟೆಗೆ 1ನೇ ಆರೋಪಿಯು ನಮ್ಮ ಮನೆಗೆ ಬಂದಿದ್ದನು ಎಂದರೆ ನಿಜ. ಮರುದಿನದ ಘಟನೆಯಲ್ಲಿ 1ನೇ ಆರೋಪಿಯು ಕಲ್ಲಿನಿಂದ ಚಾಸಾ-4 ರವರ ಬಾಯಿಗೆ ಗುದ್ದಿದ್ದರಿಂದ ಆತನ ಮೇಲಿನ ತುಟಿಗೆ ರಕ್ತಗಾಯವಾಗಿತ್ತು ಎಂದರೆ ನಿಜ. ಆರೋಪಿತರು ನನಗೆ ಮತ್ತು ಚಾಸಾ-4 ರವರಿಗೆ ಹೊಡೆಯುವಾಗ ಚಾಸಾ-5 & 6 ರವರು ಜಗಳ ಬಿಡಿಸಲು ಬಂದಿದ್ದರು ಎಂದರೆ ನಿಜ. ಆಗ 1 ರಿಂದ 3ನೇ ಆರೋಪಿತರು ಅವರ ಕೈಗಳನ್ನು ಹಿಡಿದು ಎಳೆದಾಡಿ ಅವರಿಗೆ ಅವಮಾನ ಪಡಿಸಿದ್ದರು ಎಂದರೆ ನಿಜ. ಆಗ ಚಾಸಾ-7 & 8 ರವರು ಜಗಳ ಬಿಡಿಸಿದ್ದರು ಎಂದರೆ ನಿಜ. ನಂತರ 1 ರಿಂದ 3ನೇ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು, ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ನಿಜ.

ದಿ.05-12-2019 ರಂದು ಪೋಲೀಸರು ಪಂಚನಾಮೆ ಮಾಡಲು ಬಂದಾಗ ಪೋಲೀಸರಿಗೆ ನ್ಯಾಯಾಲಯದ ಮುಂದಿರುವ ಕಲ್ಲನ್ನು ತೋರಿಸಿದ್ದೆ ಎಂದರೆ ನಿಜ. ಆಗ ಪೋಲೀಸರು ಸದರಿ ಪಂಚನಾಮೆಯ ಅಡಿಯಲ್ಲಿ ಆ ಕಲ್ಲನ್ನು ಜಪ್ತು ಪಡಿಸಿಕೊಂಡಿದ್ದರು ಎಂದರೆ ನಿಜ. ಸಾಕ್ಷಿಯು ಆ ಕಲ್ಲನ್ನು ಗುರುತಿಸಿದ್ದರಿಂದ ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಜಿ. ಡಿ. ವಕೀಲರಿಂದ

1 ರಿಂದ 3 ನೇ ಆರೋಪಿತರು ನನ್ನ ಸಂಬಂಧಿಕರು ಎಂದರೆ ನಿಜ. ಆ ದಿನ ಪೋಲೀಸ್ ಠಾಣೆಗೆ ನಾನು, ಚಾಸಾ-4 ರಿಂದ 6 ರವರು ಹೋಗಿದ್ದೆವು. ನಿಪಿ-1 ನ್ನು ಪೋಲೀಸರು ಬರೆದಿದ್ದರು. ನಿಪಿ-1 ದೂರನ್ನು ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ಅಲ್ಲಿಗೆ ಬಂದು ಪಡೆದುಕೊಂಡಿದ್ದರು. ಆ ದಿನ ಪೋಲೀಸರು ಒಂದು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮು. ಮಾ. 1 ನ್ನು ಪೋಲೀಸರಿಗೆ ನಾನೇ ಕೊಟ್ಟಿದ್ದೆನು. ಈ ರೀತಿಯ ಕಲ್ಲುಗಳು ಎಲ್ಲಾ ಕಡೆ ದೊರೆಯುತ್ತವೆ ಎಂದರೆ ನಿಜ. ಘಟನೆಯಲ್ಲಿ ಚಾಸಾ-4 ರವರ ಬಟ್ಟೆಯ ಮೇಲೆ ರಕ್ತದ ಕಲೆಗಳಾಗಿದ್ದವು. ಆ ಬಟ್ಟೆಗಳನ್ನು ಪೋಲೀಸರು ಪಡೆದುಕೊಂಡಿಲ್ಲ. ನನ್ನ ತಾಯಿ ಆ ಬಟ್ಟೆಗಳನ್ನು ಬಿಸಾಕಿದ್ದಳು.

ಪೋಲೀಸರು ಬಂದಾಗ ಬೆಳಗ್ಗೆ 6 ಗಂಟೆಯಾಗಿತ್ತು. ಆಗ ಪೋಲೀಸರಿಗೆ ಸ್ಥಳವನ್ನು ತೋರಿಸಿದ್ದೆನು. ಪಂಚನಾಮೆ ಮಾಡುವ ಕಾಲಕ್ಕೆ ಪೋಲೀಸರು ಮತ್ತು ನಾನು ಮಾತ್ರ ಇದ್ದೆವು. ಆರೋಪಿತರು ನನ್ನ ಮೇಲೆ, ಚಾಸಾ-4 & 7 ರವರ ಮೇಲೆ ಕ್ರಿಮಿನಲ್ ಪ್ರಕರಣ ಹೂಡಿದ್ದರು ಎಂದರೆ ನಿಜ. ಅವರು ನಮ್ಮ ಮೇಲೆ ದೂರು ಕೊಟ್ಟಿದ್ದರಿಂದ, ಅವರಿಗೆ ತೊಂದರೆ ನೀಡಲು ಈ ಸುಳ್ಳು ದೂರು ಕೊಟ್ಟಿದ್ದೆ ಎಂದರೆ ಸರಿಯಲ್ಲ.

ಆ ದಿನ ನನ್ನ ಮನೆಯಲ್ಲಿ ಇದ್ದ ಹಣವನ್ನು 1 ನೇ ಆರೋಪಿಯು ತೆಗೆದುಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮಧ್ಯರಾತ್ರಿ 1 ಗಂಟೆಗೆ ಕತ್ತಲಾಗಿತ್ತು ಎಂದರೆ ನಿಜ. ಆಗ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸುತ್ತಿರಲಿಲ್ಲ ಎಂದರೆ ನಿಜ. 1 ನೇ ಆರೋಪಿಯು ನಮ್ಮ ಮನೆಗೆ ಬಂದಿಲ್ಲ, ಆ ದಿನ ಯಾವುದೇ ಜಗಳ ಆಗಿಲ್ಲ, ಆರೋಪಿತರು ನಮಗೆ ಹೊಡಿ ಬಡಿ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಅವಮಾನ ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ,

1 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.